# “ಗೆಳತಿ” ಯ ಸಮಸ್ಯೆಗಳಿಗೆ ಕಿವಿಯಾಗುವ

# ಡಾ| ಉಷಾ ಬಿ.ಆರ್.

MBBS.MS, DNB, FMAS, DRM (Ex.Sr. AIIMS, Delhi)



ಇಂದಿನ ಸ್ವಾಭಿಮಾನಿ ಮಹಿಳೆ ಸಮಯವನ್ನು ಮೀರಿ ನಡೆಯುತ್ತಾಳೆ, ಆದರೆ ತನ್ನ ವೈಯಕ್ತಿಕ ಆರೋಗ್ಯ ಸಮಾಚಾರಕ್ಕೆ ಬಂದಾಗ ಸುಪ್ತ ಮನಸ್ಸಿಗೆ ಜಾರುತ್ತಾಳೆ. ಆಕೆಯ ಸಮಸ್ಯೆಗಳನ್ನು ಹೇಳಿಕೊಳ್ಳಲಾಗದೆ ಖಿನ್ನಳಾಗುತ್ತಾಳೆ ! ಚಿಂತಿಸದಿರಿ, ಮಹಿಳೆಯರ ಸಂಪೂರ್ಣ ಆರೋಗ್ಯಕ್ಕಾಗಿ ಪಣ ತೊಟ್ಟಿದೆ ‘ಕೇಳೇ ಗೆಳತಿ’.

ಕೇಳೇ ಗೆಳತಿ ವಿಡಿಯೋ ತುಣುಕುಗಳು ಹದಿಹರೆಯದವರಿಂದ ಹಿಡಿದು ಇಳಿವಯಸ್ಸಿನ ಮಹಿಳೆಯರಿಗೆ ಎಲ್ಲಾ ವಯೋಮಾನದರನ್ನು ಗುರಿಯಾಗಿಸಿಕೊಂಡು ಸುಪ್ರಭಾತ ಚಾನೆಲ್ ಆರಂಭಿಸಿರುವ ಒಂದು ಹೊಸ ಪ್ರಯತ್ನ.

ಬದಲಾದ ಇಂದಿನ ದಿನದ ಹೆಣ್ಣುಮಕ್ಕಳಲ್ಲಿ ಲೌಕಿಕ ಜ್ಞಾನ, ತಂತ್ರಜ್ಞಾನ, ತಮ್ಮ ದೇಹ ಸೌಂದರ್ಯ, ಭವಿಷ್ಯದ  ನಿರ್ಧಾರ ಇಂಥವುಗಳ ಅರಿವು ಮೂಡಿರುವುದು ನವಯುಗದ ಆಲೋಚನಾ ಪ್ರೌಢಿಮೆಯನ್ನು ಬಿಂಬಿಸುತ್ತದೆ. ಯಾವ ಸವಾಲನ್ನೂ ಎದುರಿಸಲು ಹಿಂದೇಟು ಹಾಕುತ್ತಿಲ್ಲ, ದೈಹಿಕವಾಗಿ, ಮಾನಸಿಕವಾಗಿ, ಸಕಾರಾತ್ಮಕವಾಗಿ ಚಿಂತಿಸುವ ಆಧುನಿಕ ಸ್ತ್ರೀ ಓರ್ವ ‘ಸಂಪೂರ್ಣ ಸ್ತ್ರೀ’ಯಾಗಿದ್ದಾಳೆ.

ಆದರೂ, ವಿವಿಧ ಕಾರಣಗಳಿಂದಾಗಿ ಮಹಿಳೆಯರ ಆರೋಗ್ಯ ಸ್ಥಿತಿ ಹದಗೆಡುತ್ತಿರುವುದು ನೋವಿನ ಸಂಗತಿ. ಉದಾಸೀನಕ್ಕೆ ಮದ್ದಿಲ್ಲ ಎಂಬಂತೆ ತಮ್ಮ ಆರೋಗ್ಯವನ್ನು ಕಡೆಗಣಿಸುವಲ್ಲಿ ಸ್ವಯಂ ಪ್ರೇರಿತ ಕಾರಣಗಳು  ಮಾರಕವಾಗಿವೆ. ಮಹಿಳೆಯರಲ್ಲಿ ತಮ್ಮ ದೇಹದಲ್ಲಿನ ಬೆಳವಣಿಗೆ ಮತ್ತು ವ್ಯತ್ಯಾಸಗಳ ಬಗ್ಗೆ ಮುಂಚೆಯೇ ತಿಳಿವಳಿಕೆ ಇರುವುದು ಒಳ್ಳೆಯದು.ಹೀಗಾಗಿ ಓರ್ವ ಸಂಪೂರ್ಣ ಸ್ತ್ರೀಗೆ, ಸಂಪೂರ್ಣ ಮಹಿಳಾ ವೈದ್ಯೆಯೊಬ್ಬರ ಅಗತ್ಯ ಖಂಡಿತಾ ಇದೆ.

## ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ?

ತನ್ನ ದೇಹದ ರಚನೆ, ಅವುಗಳ ಪ್ರಾಮುಖ್ಯತೆ ಮತ್ತು ಅದನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಅರಿತ ಮಹಿಳೆ ತನ್ನ ಕುಟುಂಬ ಮತ್ತು ಜವಾಬ್ದಾರಿಯುತ ಕೆಲಸಗಳಲ್ಲಿ ಯಶಸ್ವಿಯಾಗುತ್ತಾಳೆ. ಏಕೆಂದರೆ, ಮಾನಸಿಕ ಸಮತೋಲನ ಕಾಪಾಡುವಲ್ಲಿ ದೇಹದ ಆರೋಗ್ಯ ಸ್ಥಿತಿ ಉತ್ತಮ ಮಟ್ಟದಲ್ಲಿರುವುದು ಅಗತ್ಯ! ಹಾಗಾಗಿ ಆರಂಭದಲ್ಲೇ ಸಮಸ್ಯೆಗಳನ್ನು ನಿವಾರಿಸಿದರೆ ಮಾರಕ ಸಮಸ್ಯೆಗಳನ್ನು ಎದುರಿ ಸುವುವು. ಜೊತೆಗೆ ಮಾನಸಿಕ ಕಿರಿಕಿರಿ ಅನುಭವಿಸುವ ಪರಿಸ್ಥಿತಿ ತಪ್ಪಿಸಿಕೊಳ್ಳಬಹುದು.

ಹಾಗಾದರೆ ಮಹಿಳೆಯರ ಎಲ್ಲಾ ನೋವಿನ ದೈಹಿಕ ಸಮಸ್ಯೆಗಳಿಗೆ ಸ್ಪಂದಿಸಬಲ್ಲ ಒಬ್ಬರೇ ನುರಿತ, ಅನುಭವ ಹೊಂದಿದ, ಮಹಿಳಾ ಸ್ತ್ರೀ ರೋಗ ತಜ್ಞರು ಇದ್ದಾರೆಯೇ ಎಂಬುದು ನಿಮ್ಮ ಪ್ರಶ್ನೆಯಾಗಿದ್ದರೆ, ಉತ್ತರ ಹೌದು.  ವೈದ್ಯಕೀಯ ಕ್ಷೇತ್ರದಲ್ಲಿ ಅಲ್ಪಾವಧಿಯಲ್ಲೇ ಹುಬ್ಬೇರಿಸುವಂತಹ ಸಾಧನೆ ಮಾಡಿರುವ ಡಾ. ಉಷಾ.ಬಿ.ಆರ್ (MBBS.MS, DNB) ಅವರೇ ಅಂತಹ ವೈದ್ಯೆ. ತಮ್ಮ ಹತ್ತು ವರುಷಗಳಿಗೂ ಮೀರಿದ ಅನುಭವದಲ್ಲಿ, ಮೂರು ಸಾವಿರಕ್ಕೂ ಹೆಚ್ಚು ಹೆರಿಗೆ ಮತ್ತು ಐದು ಸಾವಿರಕ್ಕೂ ಹೆಚ್ಚು ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಐ.ವಿ.ಎಫ್  ಚಿಕಿತ್ಸೆ ಮೂಲಕ ಅನೇಕ ದಂಪತಿಗಳಿಗೆ ಸಂತಾನ ಭಾಗ್ಯ ಕರುಣಿಸಿದ ಫರ್ಟಿಲಿಟಿ ತಜ್ಞರೂ ಹೌದು.

ಡಾ.ಉಷಾ.ಬಿ.ಆರ್. ರವರು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಮುಗಿಸಿ, ಎಂಎಸ್, ಡಿಎನ್ಬಿ, ಎಫ್‌ಎಂಎಎಸ್, ಡಿಆರ್‌ಎಂ ಸ್ನಾತಕೋತ್ತರ ಮೆಡಿಕಲ್ ಪದವಿಗಳ ನಂತರ ಪ್ರತಿಷ್ಠಿತ ಏಮ್ಸ್, ನವದೆಹಲಿಯಲ್ಲಿ ಮೂರು ವರುಷಗಳ ಸೇವೆ ಸಲ್ಲಿಸಿರುತ್ತಾರೆ. ಡಾ. ಉಷಾ ಬಿ ಆರ್. ತಾವೇ ಹೆರಿಗೆ, ಸ್ಕ್ಯಾನಿಂಗ್, ಲ್ಯಾಪರೊಸ್ಕೋಪಿ ಮತ್ತು ಫರ್ಟಿಲಿಟಿ ಚಿಕಿತ್ಸೆಗಳನ್ನು ಮಾಡಬಲ್ಲ ಓರ್ವ ಸಮರ್ಥ, ಸಂಪೂರ್ಣ ಮಹಿಳಾ ವೈದ್ಯೆ.

> ಡಾ.
> ಉಷಾ ಬಿ ಆರ್. ತಾವೇ
> ಹೆರಿಗೆ, ಸ್ಕ್ಯಾನಿಂಗ್, ಲ್ಯಾಪರೊಸ್ಕೋಪಿ
> ಮತ್ತು ಫರ್ಟಿಲಿಟಿ ಚಿಕಿತ್ಸೆಗಳನ್ನು ಮಾಡಬಲ್ಲ
> ಓರ್ವ ಸಮರ್ಥ, ಸಂಪೂರ್ಣ ಮಹಿಳಾ ವೈದ್ಯೆ.

ಇದೀಗ ‘ಕೇಳೇ ಗೆಳತಿ’ ಕಾರ್ಯಕ್ರಮ, ಮಹಿಳೆಯರಿಗೆ, ನಮ್ಮ ನಾಡಿನ ಹೆಮ್ಮೆ, ಸಾಧಕಿ ವೈದ್ಯೆಯ ಅಮೂಲ್ಯ ಸಲಹೆಗಳನ್ನು ಪಡೆದುಕೊಳ್ಳಲು ಒಂದು ಅತ್ಯುತ್ತಮ ವೇದಿಕೆ ಕಲ್ಪಿಸಿಕೊಟ್ಟಿದೆ. ಇವರು ತಮ್ಮ ಆಪ್ತ ಸಲಹೆಗಳ ಮೂಲಕ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡುವ ಜೊತೆಗೆ ಮಾನಸಿಕ ಸ್ಥೈರ್ಯ ತುಂಬಬಲ್ಲರು. ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ವಯಸ್ಸಿನ ಮಹಿಳೆಯರ ದೈಹಿಕ, ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸರಳ ಪರಿಹಾರಗಳನ್ನು ನೀಡುವ ವೈದ್ಯೆ ನಿಜಕ್ಕೂ ನಿಮ್ಮ ಗೆಳತಿಯಾಗಬಲ್ಲರು.

ವೀಕ್ಷಕರೇ, ‘ಕೇಳೇ ಗೆಳತಿ’ ಕಾರ್ಯಕ್ರಮ ನೋಡಲು, ಯೂ ಟ್ಯೂಬ್‌ನಲ್ಲಿ ‘ಕೇಳೇ ಗೆಳತಿ’ ಎಂದು ಸರ್ಚ್ ಮಾಡಿ. ಚಾನೆಲ್ ಸಬ್ ಸ್ಕ್ರೈಬ್ ಮಾಡಿ, ನಿಮ್ಮ ಇಷ್ಟದ ಕಾರ್ಯಕ್ರಮದ ನೋಟಿಫಿಕೇಷನ್ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೊ: 88845 22455 ನ್ನು ಸಂಪರ್ಕಿಸಿ.




**ಉಷಾ ಸ್ಪೆಷಾಲಿಟಿ ಕ್ಲಿನಿಕ್**

No.26, 1st Cross, 7th Main, KSRTC Layout, 2nd Phase, J P Nagar,
Bangalore - 560 078, Mob: 88845 22455